UASB Library
Newspaper Clippings
Wednesday 13-04-2022 Pg .1
Jai Kisan

ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ಭಾರತದ ಹೈನೋದ್ಯಮ, ಚಹಾ ವಲಯಗಳಿಗೆ ವರದಾನವಾಗಿ ಪರಿಣಮಿಸಿದೆ. ಈ ಅವಕಾಶವನ್ನು ಕೇಂದ್ರ ವಾಣಿಜ್ಯ ಸಚಿವಾಲಯ ಸದುಪಯೋಗಪಡಿಸಿಕೊಳ್ಳಬೇಕಿದೆ.

ಶ್ರೀಲಂಕಾ ಆರ್ಥಿಕ ಬಿಕ್ಕಟ್ಟು ಹೈನೋದ್ಯಮಕ್ಕೆ ಹಿತಾನುಭವ

■ ಅರ್ಥವಿಹಾರಿ

ನೆರೆಯ ಶ್ರೀಲಂಕಾ ಶೇ.15ರಷ್ಟು ಪ್ರಮಾಣದ ಹಣದುಬ್ಬರದ ಕಾವಿಗೆ ಸಿಲುಕಿ ಬೆಂದು ಹೋಗುತ್ತಿದ್ದರೆ, ಭಾರತಕ್ಕೆ ತಂಗಾಳಿಯ ತಂಪಿನಲ್ಲಿ ಪುಳಕಗೊಳ್ಳುವ ಸಂಭ್ರಮ. ಈ ಮಾತು ಏಕೆಂದರೆ ಇದುವರೆಗೆ ನಮ್ಮನ್ನು ಕಂಡರೆ ಅಷ್ಟಕ್ಕಷ್ಟೇ ಎಂಬಂತಿದ್ದ ಶ್ರೀಲಂಕಾ ಈಗ ಪ್ರತಿಯೊಂದಕ್ಕೂ ಭಾರತದತ್ತ ಕೈ ಚಾಚುವ ದೈನೇಸಿ ಸ್ಥಿತಿಗೆ ತಲುಪಿದೆ. ಇದರ ಲಾಭ ದೇಶೀಯ ಹೈನೋದ್ಯಮ, ಚಹಾ ಉದ್ಯಮಗಳಿಗೆ ಆಗುತ್ತಿದೆ.

ಮೊದಲು ಹೈನೋದ್ಯಮವನ್ನೇ ತೆಗೆದುಕೊಳ್ಳೋಣ. ಸತತ 30 ವರ್ಷಗಳ ಕಾಲ ಭಾರತದ ಹೈನು ಉತ್ಪನ್ನಗಳ ಆಮದಿಗೆ ಶ್ರೀಲಂಕಾ ನಿರ್ಬಂಧ ಹೇರಿತ್ತು. ಸ್ಥಳೀಯ ಡೇರಿ ಉದ್ಯಮದ ಹಿತ ಕಾಯುವುದೇ ಅದಕ್ಕೆ ಮುಖ್ಯವಾಗಿತ್ತು. ಆದರೆ ತೀವ್ರ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಇಂದು ಕೊಲಂಬೋ ಮಾರುಕಟ್ಟೆಯಲ್ಲಿ ಒಂದು ಲೀಟರ್ ಹಾಲಿನದರ 1,500ರೂದಿಂದ 2000ರೂಗೆತಲುಪಿದೆ. ಶಿಶುಗಳಿಂದ ಹಿಡಿದು ಎಳೆಯ ಮಕ್ಕಳವರೆಗೆ ಹನಿ ಹಾಲು ಸಿಗದೇ ಹಾಹಾಕಾರಗೈಯುತ್ತಿದ್ದರೆ ಕಂಗಾಲಾದ ಕೊಲಂಬೋ ನವದೆಹಲಿಯ ಮೊರೆ ಹೋಗಿ ಹಾಲು ಪೂರೈಕೆ ಮಾಡಬೇಕೆಂದು ಆರ್ತವಾಗಿ ಬೇಡಿಕೊಳ್ಳುತ್ತಿದೆ. ಹೀಗಾಗಿ ಅಮುಲ್, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಗಳಿಗೆ(ಎನ್‌ಡಿಡಿಬಿ) ಮತ್ತೆ ಶ್ರೀಲಂಕಾಕ್ಕೆ ಹೈನು ಉತ್ಪನ್ನಗಳನ್ನು ರಫ್ತು ಮಾಡುವ ಸದಾವಕಾಶ ಲಭಿಸಿದೆ. ಆದ್ದರಿಂದ ಈ ಎರಡು ಸಂಸ್ಥೆಗಳು ಮತ್ತು ಇತರ ಕಂಪನಿಗಳು ಕೇಂದ್ರ ವಾಣಿಜ್ಯ ಸಚಿವಾಲಯದ ಸೂಚನೆಗೆ ಕಾತರದಿಂದ ಕಾಯುತ್ತಿವೆ. ಮತ್ತು ಒಂದು ವೇಳೆ ಬೇಡಿಕೆ ಬಂದರೆ ಹಾಲು ಮತ್ತಿತರ ಉತ್ಪನ್ನಗಳನ್ನು ಪೂರೈಸಲು ಸಜ್ಜಾಗಿವೆ.

ಶ್ರೀಲಂಕಾದ ಹೈನು ಮಾರುಕಟ್ಟೆಯ ವಹಿವಾಟು ಸುಮಾರು 400 ದಶಲಕ್ಷ ಡಾಲರ್‌ದಷ್ಟಿದ್ದು, ಇದರಲ್ಲಿ



ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾದ ಡೇರಿಗಳು ಸಿಂಹಪಾಲು ಹೊಂದಿವೆ. ಭಾರತದ ಪಾಲು ಇಲ್ಲಿ ಲೆಕ್ಕಕ್ಕಿಲ್ಲ. ಇಲ್ಲಿಗೆ ಸ್ಕಿಮ್ಡ್ ಮಿಲ್ಕ್ ಪೌಡರ್ ರಫ್ತು ಮಾಡಲು ಅಮುಲ್ ಸದವಕಾಶಕ್ಕಾಗಿ ಕಾಯುತ್ತಿದೆ. ಆದರೆ ಶ್ರೀಲಂಕಾ ಕೆಲವು ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದ ಹೊಂದಿರುವದರಿಂದ ಅಲ್ಲಿಯ ಮಾರುಕಟ್ಟೆಗೆ ಕಾಲಿಡಲು ಸಾಧ್ಯವಾಗುತ್ತಿಲ್ಲ. ಆದರೆ ಸದ್ಯದ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿಯಾದರೂ ಶ್ರೀಲಂಕಾಕ್ಕೆ ಹೈನು ಉತ್ಪನ್ನಗಳನ್ನು ಪೂರೈಸಲು ಅಮುಲ್ ಕಾತರದಿಂದ ಕಾಯುತ್ತಿದೆ.

ಹಾಗೆ ನೋಡಿದರೆ ಭಾರತದ ಎನ್‌ಡಿಡಿಬಿ 1990ರ ದಶಕದಲ್ಲೇ ಶ್ರೀಲಂಕಾದಲ್ಲಿ ಸಹಕಾರಿ ಹೈನೋದ್ಯಮ ಬೆಳೆಸಲು ಶ್ರಮಿಸಿತ್ತು. ಅಲ್ಲಿಯ ಡೇರಿ ಉದ್ಯಮ ಕಿರಿಯಾ ಮಿಲ್ಕ್ ಇಂಡಸ್ಟ್ರೀಸ್ ಜೊತೆಗೂಡಿ ಜಂಟಿ ಉದ್ಯಮವನ್ನು ಸ್ಥಾಪಿಸಿತ್ತು. ಆದರೆ ಸ್ಥಳೀಯ ಡೇರಿ ಉದ್ಯಮದ ಒತ್ತಡಕ್ಕೆ ಬಾಗಿದ ಶ್ರೀಲಂಕಾ ಸರಕಾರ ತನ್ನ ನೆಲದಲ್ಲಿ ಎನ್‌ಡಿಡಿಬಿ ಬೆಳೆಯಲು ಅವಕಾಶ ಕೊಡಲಿಲ್ಲ. ಹೀಗಾಗಿ ಶ್ರೀಲಂಕಾ ಮಾರುಕಟ್ಟೆಯಲ್ಲಿ ಭಾರತದ ಹೈನು ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಬರುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಶ್ರೀಲಂಕಾದೊಂದಿಗೆ ವಾಣಿಜ್ಯ ಒಪ್ಪಂದ ಮಾಡಿಕೊಳ್ಳಬೇಕೆಂದು ಡೇರಿ ಉದ್ಯಮದ ವಿಶ್ಲೇಷಕರು ಹೇಳುತ್ತಾರೆ. ಈ ನಿಟ್ಟಿನಲ್ಲಿ ಈಗ ಒಳ್ಳೆಯ ಅವಕಾಶ ದೊರೆತಿದೆ. ಶ್ರೀಲಂಕಾದಿಂದ ಬೇಡಿಕೆ ಬಂದರೆ ಕೇಂದ್ರ ವಾಣಿಜ್ಯ ಸಚಿವಾಲಯ ಶ್ರೀಲಂಕಾಕ್ಕೆ ಹಾಲು ಅಥವಾ ಹಾಲು ಪುಡಿ ರಫ್ತಿಗೆ ತಕ್ಷಣ ಅನುಮತಿ ನೀಡಬೇಕಿದೆ.



ಚಹಾ ರಫ್ತು

ಸಾಂಪ್ರದಾಯಿಕ ಚಹಾ ಉತ್ಪಾದನೆಯಲ್ಲಿ ಶ್ರೀಲಂಕಾಕ್ಕೆ ಜಗತ್ತಿನಲ್ಲೇ ನಂ.ಒನ್ ಸ್ಥಾನವಿದೆ. ಸದ್ಯದ ಆರ್ಥಿಕ ಬಿಕ್ಕಟ್ಟು ಹಾಗೂ ಕಳೆದ ವರ್ಷ ಶ್ರೀಲಂಕಾ ಸರಕಾರ ಕೈಗೊಂಡ ಸಾವಯವ ಕೃಷಿ ನೀತಿ ಈ ದೇಶದ ಚಹಾ ವಲಯಕ್ಕೆ ಮರಣಶಾಸನವಾಯಿತು. ಜಾಗತಿಕ ಚಹಾ ಮಾರುಕಟ್ಟೆಯಲ್ಲೂ ಶ್ರೀಲಂಕಾಕ್ಕೆ ಮಹತ್ವದ ಸ್ಥಾನವಿದೆ. ಈಗ ಅದಕ್ಕೂ ಕುತ್ತು ಬಂದಿದ್ದು, ಶ್ರೀಲಂಕಾಕ್ಕೆ ಪೈಪೋಟಿ ನೀಡಲು ಭಾರತದ ಚಹಾ ಉದ್ಯಮಕ್ಕೆ ಆನೆ ಬಲ ಬಂದಂತಾಗಿದೆ. ಪಶ್ಚಿಮ ಏಷ್ಯಾ, ಯುರೋಪು ಮಾರುಕಟ್ಟೆಗಳಲ್ಲಿ ಮೇಲುಗೈ ಸಾಧಿಸಲು ಅನುಕೂಲವಾಗಲಿದೆ. ಶ್ರೀಲಂಕಾದಲ್ಲಿ 300 ದಶಲಕ್ಷ ಕೆಜಿಗೂ ಅಧಿಕ ಪ್ರಮಾಣದ ಚಹಾ ಉತ್ಪಾದನೆಯಾಗುತ್ತದೆ. ಈ ಪೈಕಿ ಸುಮಾರು ಶೇ.90-95ರಷ್ಟು ರಫ್ತಾಗುತ್ತದೆ. ಆದರೆ ಪ್ರಸಕ್ತ ಸಾಲಿನ ಫೆಬ್ರುವರಿಯಲ್ಲಿ ಉತ್ಪಾದನೆ ಶೇ.20ರಷ್ಟು ಇಳಿಮುಖವಾಗಿದೆ. ಭಾರತದಲ್ಲಿ ಚಹಾ ಉತ್ಪಾದನೆ ಪ್ರಮಾಣ 114 ದಶಲಕ್ಷ ಕೆಜಿದಷ್ಟಿದೆ. ಸರಕಾರ ದೇಶೀಯ ಚಹಾ ವಲಯಕ್ಕೆ ಸಬ್ಸಿಡಿ ನೆರವು ನೀಡಿದರೆ ರಫ್ತು ಹೆಚ್ಚಿಸಲು ಅನುಕೂಲವಾಗಲಿದೆ ಎಂದು ಚಹಾ ಬೆಳೆಗಾರರು ಆಗ್ರಹಿಸುತ್ತಾರೆ. ಒಟ್ಟಿನಲ್ಲಿ ಶ್ರೀಲಂಕಾ ಆರ್ಥಿಕ ಬಿಕ್ಕಟ್ಟು ಭಾರತದ ಪಾಲಿಗೆ ವರದಾನವಾಗಿ ಪರಿಣಮಿಸಿರುವದಂತೂ ಸುಳ್ಳಲ್ಲ.

13-04-2022
Sk Pg 08

ಎಲ್ಲ ಬೆಳೆಗೂ ಕನಿಷ್ಠ ಬೆಂಬಲ ಬೆಲೆ ಕೊಡಿ

ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಪ್ರೊ.ಯೋಗೇಂದ್ರ ಯಾದವ್ ಆಗ್ರಹ

■ **ವಿಕ ಸುದ್ದಿಲೋಕ** ಮೈಸೂರು

ಕೇಂದ್ರ ಸರಕಾರದ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ಕೇವಲ 23 ಬೆಳೆಗಳಿಗೆ ಮಾತ್ರವೇ ಸೀಮಿತವಾಗದೇ, ರೈತರ ಎಲ್ಲ ಬೆಳೆಗಳಿಗೂ ವಿಸ್ತರಣೆಯಾಗಬೇಕು ಎಂದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಸಂಚಾಲಕ ಪ್ರೊ. ಯೋಗೇಂದ್ರ ಯಾದವ್ ಆಗ್ರಹಿಸಿದರು.

ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ ದೇಶಾದ್ಯಂತ ನಡೆಯಲಿರುವ ವಿವಿಧ ಸಂಘಟನೆಗಳ ಸಂಯುಕ್ತ ಹೋರಾಟಕ್ಕೆ ಮೈಸೂರಿನಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ''ಭತ್ತ, ರಾಗಿ, ಕಬ್ಬು ಮುಂತಾದ ಕನಿಷ್ಠ ಬೆಂಬಲ ಬೆಲೆ(ಮಿನಿಮಮ್ ಸಪೋರ್ಟ್ ಪ್ರೈಸ್-ಎಂಎಸ್‌ಪಿ) ವ್ಯವಸ್ಥೆಯಲ್ಲಿ ಬರುವ ಬೆಳೆಗಳ ಜತೆಗೆ ಹಣ್ಣು, ತರಕಾರಿ, ಅರಣ್ಯ ಉತ್ಪನ್ನಗಳು, ಹಾಲು, ಮೊಟ್ಟೆ, ಮೀನು ಸೇರಿ ಎಲ್ಲ ಉತ್ಪನ್ನಗಳಿಗೂ ಬೆಂಬಲ ಬೆಲೆ ದೊರೆಯುವಂತಾಗಬೇಕು,'' ಎಂದು ಒತ್ತಾಯಿಸಿದರು.

''ಕನಿಷ್ಠ ಬೆಂಬಲ ಬೆಲೆಯನ್ನು 23 ಬೆಳೆಗಳ ಪೈಕಿ ಮುಂಗಾರು ಹಾಗೂ ಹಿಂಗಾರು ಬೆಳೆಗಳಿಗೊಂದು ಬಾರಿಯಂತೆ ವರ್ಷದಲ್ಲಿ ಎರಡು ಬಾರಿ ಪ್ರಕಟಿಸಲಾಗುವುದು. ಆದರೆ ವಾಸ್ತವದಲ್ಲಿ ರೈತರಿಗೆ ಎಲ್ಲಿಯೂ ಕನಿಷ್ಠ ಬೆಂಬಲ ಬೆಲೆಯೇ ದೊರಕುತ್ತಿಲ್ಲ. ಕ್ವಿಂಟಾಲ್ ಭತ್ತಕ್ಕೆ 1,940 ರೂ.ನಂತೆ ಎಂಎಸ್‌ಪಿ ನಿಗದಿ ಮಾಡಿದ್ದಾರೆ. ಆದರೆ ರೈತರಿಗೆ ಸಿಗುತ್ತಿರುವುದು ಕೇವಲ 1,300ರಿಂದ 1,500 ರೂ.ಗಳಷ್ಟೇ. ಕ್ವಿಂಟಾಲ್ ರಾಗಿಗೆ 3,377 ರೂ.ನಂತೆ ಎಂಎಸ್‌ಪಿ ನಿಗದಿಗೊಳಿಸಲಾಗಿದೆ. ಆದರೆ ರೈತರಿಗೆ ಸಿಗುತ್ತಿರುವುದು ಕೇವಲ 1,850 ರೂ. ಮಾತ್ರ. ರೈತರು ಬೆಳೆದ ಭತ್ತಕ್ಕೆ 400ರಿಂದ 500 ರೂ. ರಾಗಿಗೆ 1,400ರಿಂದ 1,500 ರೂ.ನಷ್ಟು ನಷ್ಟವಾಗುತ್ತಿದೆ. ಹಾಗಾದರೆ ಸರಕಾರದ ಭರವಸೆಗೆ ಅರ್ಥವೇನು?,'' ಎಂದು ಪ್ರೊ.ಯೋಗೇಂದ್ರ ಯಾದವ್ ಪ್ರಶ್ನಿಸಿದರು.



ಎಂಎಸ್‌ಪಿಗೆ ಆಗ್ರಹಿಸಿ ದೇಶಾದ್ಯಂತ ನಡೆಯಲಿರುವ ಹೋರಾಟಕ್ಕೆ ಚಾಲನೆ

4 ಪ್ರಮುಖ ಬೇಡಿಕೆಗಳು

''ಕೇಂದ್ರ ಸರಕಾರದ ಎಂಎಸ್‌ಪಿ ವ್ಯವಸ್ಥೆಗೆ ಕಾನೂನು ಖಾತರಿಬೇಕು. ಎಲ್ಲಾ ಬೆಳೆ ಹಾಗೂ ಉತ್ಪನ್ನಗಳಿಗೆ ಎಂಎಸ್‌ಪಿ ವ್ಯವಸ್ಥೆ ಜಾರಿಯಾಗಬೇಕು. ಬೆಳೆಗಳ ಬೆಂಬಲ ಬೆಲೆಯನ್ನು ಅವೈಜ್ಞಾನಿಕವಾಗಿ ನಿರ್ಧರಿಸದೆ ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನ ಪ್ರಕಾರ ಉತ್ಪಾದನಾ ವೆಚ್ಚಕ್ಕೆ ಶೇ.50ರಷ್ಟು ಸೇರಿಸಿ ಕನಿಷ್ಠ ಬೆಂಬಲ ಬೆಲೆ ನಿಗದಿಗೊಳಿಸಬೇಕು. ರೈತರಿಗೆ ಎಂಎಸ್‌ಪಿ ಪಾರದರ್ಶಕವಾಗಿ ಸಿಗುವ ವ್ಯವಸ್ಥೆಯಾಗಬೇಕು. ಉದ್ಯೋಗ ಖಾತರಿಗೆ ಮನರೇಗಾ, ಆಹಾರ ಭದ್ರತೆಗೆ ಕಾನೂನು ಇರುವಂತೆ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಪಡಿಸುವ ಕಾನೂನು ಜಾರಿಗೆ ತರಬೇಕು,'' ಎಂಬ ನಾಲ್ಕು ಅಂಶಗಳ ಬೇಡಿಕೆಗಳನ್ನು ಯೋಗೇಂದ್ರ ಯಾದವ್ ಕೇಂದ್ರ ಸರಕಾರದ ಮುಂದಿಟ್ಟರು.

ಸಂಸದರ ಕಚೇರಿ ಮುಂದೆ ರೈತರ ಪ್ರತಿಭಟನೆ

ನಗರದ ಕಲಾಮಂದಿರದಲ್ಲಿ ನಡೆದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಸಂಯುಕ್ತ ಹೋರಾಟದ ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಸಂಸದ ಪ್ರತಾಪ್ ಸಿಂಹ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ರೈತರು ಬೆಳೆದ ದವಸ ಧಾನ್ಯಗಳನ್ನು ಸಂಸದರ ಕಚೇರಿ ಎದುರು ರಾಶಿ ಹಾಕಿ ಧಿಕ್ಕಾರ ಕೂಗಿ ಪ್ರಧಾನಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರೈತರು ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಎಲ್ಲಿ ಸಿಗುತ್ತಿದೆ ಎಂದು ತೋರಿಸಿ ಪ್ರತಿಭಟನಾಕಾರರು ಆಕ್ರೋಶ ಹೊರಹಾಕಿದರು. ಸಾಹಿತಿ ದೇವನೂರ ಮಹಾದೇವ, ಸಾಮಾಜಿಕ ಕಾರ್ಯಕರ್ತ ಎಸ್.ಆರ್.ಹಿರೇಮಠ್, ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ರೈತ ಮುಖಂಡ ಚಾಮರಸ ಮಾಲೀ ಪಾಟೀಲ್ ಅರಸ್, ಬೈಯಾರೆಡ್ಡಿ ಸೇರಿದಂತೆ ಇತರ ರೈತ ಮುಖಂಡರು ಹಾಜರಿದ್ದರು.

13-04-2022 Vk Pg 05

For more information visit
University Library Website
Web - uasbagrilibindia.org
E-mail- librarian@uasbangalore.edu.in

13-04-2022 Ind Exp Pg 02

Mango farmers partner with tech firms for sales

BOSKY KHANNA @Bengaluru

WHILE everyone awaits the king of fruits to be available at the markets, others choose the best and get them directly delivered from the farm to the door step.

Many apartment complexes, tech parks and tech firms in Bengaluru have directly partnered with mango growers to get the best mangoes directly from the fields. Some have gone a step further and made advance booking of entire farm produce to ensure that supplies are directly supplied to apartments or techies of particular companies.

The direct interaction with customers has benefited the farmers, especially those on outskirts of the city and in Kolar, Ramangara, Mandya, Chikkaballapur and other surrounding areas. This sort of business dealing has also received a thumbs up from the Karnataka State Mango Development and Marketing Corporation Limited (KSMDMCL).



The new business method is an outcome of the pandemic over the last two years. During the pandemic, as sales were affected, many used mobile services to make purchases. Postal orders and sales were also on the rise.

When the demand rose, Hopcoms and KSMDMCL set up special counters in tech parks and apartment complexes for sales. During this time farmers shared their details with customers and built a business platform. KSMDMCL Managing Director C Nagaraj said that they were aware of such a tie-up and reckoned it was not a bad concept.

"We are fine as long as the farmers are benefiting from the deal," he said.